ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 01-03-1971.

*ಸಿದ್ಧಿ - ಸ್ವರೂಪರಾಗಲು ಸಹಜ ವಿಧಿ* (सिद्धि-स्वरूप बनने की सहज विधि)

ಎಲ್ಲರೂ ಮಾಸ್ಟರ್ ತ್ರಿಕಾಲದರ್ಶಿಯಾಗಿದ್ದೀರಾ? ತ್ರಿಕಾಲದರ್ಶಿ ಆಗುವುದರಿಂದ ಯಾವುದೇ ಕಾರ್ಯ ಅಸಫಲವಾಗುವುದಿಲ್ಲ. ಯಾವುದೇ ಕೆಲಸವನ್ನು ಮಾಡುವ ಮೊದಲು ತಮ್ಮ ಮಾಸ್ಟರ್ ತ್ರಿಕಾಲದರ್ಶಿಯ ಸ್ಥಿತಿಯಲ್ಲಿ ಸ್ಥಿತರಾಗಿ ಕಾರ್ಯದ ಆದಿ-ಮಧ್ಯ-ಅಂತ್ಯವನ್ನು ತಿಳಿದು ಕರ್ತವ್ಯ ಮಾಡುವುದರಿಂದ ಸದಾ ಸಫಲತೆ ಸಿಗುವುದು ಎಂದರೆ ಸಫಲತೆಯ ಮೂರ್ತಿಯಾಗುವಿರಿ ಅಥವಾ ಸಂಪೂರ್ಣಮೂರ್ತಿ ಆಗುವಿರಿ. ಯೋಗಿಗಳಿಗೆ ರಿದ್ಧಿ-ಸಿದ್ಧಿ ಸಿಗುತ್ತದೆ ಎಂಬ ಗಾಯನವೆನಿದೆಯೋ ಅದು ಯಾವ ಸಿದ್ಧಿಯಾಗಿದೆ? ಸಂಕಲ್ಪದ ಸಿದ್ಧಿ ಮತ್ತು ಕರ್ತವ್ಯದ ವಿಧಿ. ಈ ಎರಡೂ ಆಗುವುದರಿಂದ ಜನ್ಮಸಿದ್ಧ ಅಧಿಕಾರ ಸಹಜ ಪಡೆಯುವಿರಿ. ಸಂಕಲ್ಪದ ಸಿದ್ಧಿ ಹೇಗೆ ಬರುತ್ತದೆ ಎಂದು ಗೊತ್ತೇ? ಸಂಕಲ್ಪದ ಸಿದ್ಧಿಯಾಗದೇ ಇರಲು ಕಾರಣವೇನು? ಏಕೆಂದರೆ ಈಗ ಬಹಳ ಸಂಕಲ್ಪಗಳು ವ್ಯರ್ಥ ನಡೆಯುತ್ತವೆ. ವ್ಯರ್ಥ ಸಂಕಲ್ಪಗಳು ಮಿಶ್ರಣವಾಗುವುದರಿಂದ ಸಮರ್ಥರಾಗುವುದಿಲ್ಲ. ರಚಿಸುವ ಸಂಕಲ್ಪಗಳ ಸಿದ್ಧಿಯಾಗುವುದಿಲ್ಲ. ವ್ಯರ್ಥ ಸಂಕಲ್ಪಗಳ ಸಿದ್ಧಿಯಂತೂ ಆಗಲಾರದು. ಆದ್ದರಿಂದ ಸಂಕಲ್ಪಗಳ ಸಿದ್ಧಿ ಪ್ರಾಪ್ತಿ ಮಾಡಿಕೊಳ್ಳಲು ವ್ಯರ್ಥ ಸಂಕಲ್ಪ ರಚಿಸದೇ ಸಮರ್ಥ ಸಂಕಲ್ಪಗಳ ರಚನೆ ಮಾಡುವುದೇ ಮುಖ್ಯ ಪುರುಷಾರ್ಥವಾಗಿದೆ. ತಿಳಿಯಿತೇ? ಜಾಸ್ತಿ ರಚನೆಯನ್ನು ರಚಿಸುತ್ತೀರಿ, ಆದ್ದರಿಂದ ಪೂರ್ಣ ಪಾಲನೆ ಮಾಡಿ ಅವುಗಳನ್ನು ಕಾರ್ಯದಲ್ಲಿ ನಿಯೋಜಿಸುವುದು ಆಗುವುದಿಲ್ಲ. ಹೇಗೆ ಲೌಕಿಕ ರಚನೆಯೂ (ಮಕ್ಕಳು) ಒಂದು ವೇಳೆ ಹೆಚ್ಚಾದರೆ ಅವರನ್ನು ಯೋಗ್ಯರನ್ನಾಗಿ ಮಾಡಲಾಗದು. ಅದೇ ರೀತಿ ಸಂಕಲ್ಪಗಳ ರಚನೆಯನ್ನು ಹೆಚ್ಚು ಮಾಡುತ್ತೀರಿ. ಸಂಕಲ್ಪಗಳ ರಚನೆ ಎಷ್ಟು ಕಡಿಮೆಯೋ ಅಷ್ಟು ಶಕ್ತಿಶಾಲಿಯಾಗಿರುವುದು. ಎಷ್ಟು ರಚನೆ ಹೆಚ್ಚೋ ಅಷ್ಟು ಶಕ್ತಿಹೀನ ರಚನೆಯಾಗುತ್ತದೆ. ಆದ್ದರಿಂದ ಸಂಕಲ್ಪಗಳ ಸಿದ್ಧಿ ಪಾಪ್ತಿ ಮಾಡಿಕೊಳ್ಳಲು ಪುರುಷಾರ್ಥ ಮಾಡಬೇಕು. ವ್ಯರ್ಥ ರಚನೆಯನ್ನು ನಿಲ್ಲಿಸಿ ಇಲ್ಲವಾದರೆ ಇತ್ತೀಚೆಗೆ ವ್ಯರ್ಥ ರಚನೆಯನ್ನು ಮಾಡಿ ಅದರ ಪಾಲನೆಯಲ್ಲಿ ಬಹಳ ಸಮಯವನ್ನು ವ್ಯರ್ಥಗೊಳಿಸುತ್ತಾರೆ. ಆದ್ದರಿಂದ ಸಂಕಲ್ಪಗಳ ಸಿದ್ಧಿ ಮತ್ತು ಕರ್ಮದ ಸಫಲತೆ ಕಡಿಮೆಯಾಗುತ್ತದೆ. ಕರ್ಮದ ಸಫಲತೆಯ ಯುಕ್ತಿಯಾಗಿದೆ - ಮಾಸ್ಟರ್ ತ್ರಿಕಾಲದರ್ಶಿಯಾಗುವುದು. ಕರ್ಮ ಮಾಡುವ ಮೊದಲು ಆದಿ, ಮಧ್ಯ ಮತ್ತು ಅಂತ್ಯವನ್ನು ತಿಳಿದು ಕರ್ಮ ಮಾಡಿ. ಆದರೆ ಕರ್ಮ ಮಾಡಿದ ನಂತರ ಅಂತ್ಯದಲ್ಲಿ ಪರಿಣಾಮವನ್ನು ನೋಡಿ ಮತ್ತೆ ಯೋಚನೆ ಮಾಡುವುದಲ್ಲ. ಆದ್ದರಿಂದ ಸಂಪೂರ್ಣರಾಗಲು ಈ ಎರಡು ಮಾತುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದು ಪ್ರವೃತ್ತಿಯವರ ಗುಂಪಾಗಿದೆ.

ಹಾಗಾದರೆ ಪ್ರವೃತ್ತಿಯಲ್ಲಿ ಇರುವವರು ಈ ಎರಡೂ ಮಾತುಗಳ ಕಡೆಗೆ ಗಮನ ಕೊಡುವುದರಿಂದ ಸೇವಾಧಾರಿಯಾಗಬಹುದು. ಸೇವೆ ಮುಖದಿಂದ ಮಾತ್ರವಲ್ಲ ಆದರೆ ಶ್ರೇಷ್ಠ ಕರ್ಮದಿಂದಲೂ ಮಾಡಬಹುದು. ಬಂದಿರುವ ಈ ಗುಂಪು ತಮ್ಮನ್ನು ಸೇವಾಧಾರಿ ಗುಂಪು ಎಂದು ತಿಳಿಯುತ್ತೀರಾ? ಈ ಗುಂಪಿನಲ್ಲಿ ಯಾರು ತಮ್ಮನ್ನು ಸೇವಾಧಾರಿ ಎಂದು ತಿಳಿಯುತ್ತೀರೋ ಅವರು ಕೈಎತ್ತಿ. ಈಗ ಯಾರು ಸೇವಾಧಾರಿ ಎಂದು ಕೈ ಎತ್ತಿರುವಿರೋ ಅವರು ಸೇವೆಯಲ್ಲಿ ಎಷ್ಟು ಸಮಯ ಸಹಯೋಗಿಗಳು ಆಗಬಹುದು? ಮಾತೆಯರ ಸಹಯೋಗದಿಂದ ಬಹಳ ಪ್ರಸಿದ್ಧಿಯಾಗುತ್ತದೆ. ಬಂದಿರುವವರೆಲ್ಲ ಸೇವೆಯಲ್ಲಿ ಸಹಯೋಗಿಗಳಾದರೆ ಬಹಳ ಬೇಗನೇ ಪ್ರಸಿದ್ಧಿ ಮಾಡುವಿರಿ ಏಕೆಂದರೆ ದಂಪತಿಗಳಾಗಿ ನಡೆಯುತ್ತಿದ್ದೀರಿ. ಈ ರೀತಿಯ ದಂಪತಿಗಳು ತಮ್ಮ ಸೇವೆಯಲ್ಲಿ ಬಹಳ ಪ್ರಸಿದ್ಧಿ ಮಾಡಬಹುದು. ಪ್ರತಿಯೊಂದು ಆತ್ಮನನ್ನು ತಮ್ಮೆಡೆಗೆ ಆಕರ್ಷಿಸುವಂತಹ ಕರ್ತವ್ಯವನ್ನು ಮಾಡಿ ತೋರಿಸಿ. ದಂಪತಿಗಳ ರೂಪದಲ್ಲಿ ನಡೆಯುವ ಮಾತೆಯರ ಗುಂಪಿಗೆ ಸಮಯ ಕೊಡುವುದು ಸಹಜವಾಗಿದೆ. ಈಗಲೂ ಸಮಯ ಮಾಡಿಕೊಂಡು ಬಂದಿರುವಿಕೆ, ಈಗಲೂ ತಮ್ಮ ಹಿಂದೆ ಪ್ರವೃತ್ತಿ(ಕುಟುಂಬ) ನಡೆಯುತ್ತಿದೆ. ಬಂಧನಗಳನ ಸಡಿಲಗೊಳಿಸಿಕೊಂಡು, ಈ ಮಾತುಗಳು ಅವಶ್ಯಕವೆಂದು ತಿಳಿದು ತಲುಪಿರುವಿ ಅದೇ ರೀತಿ ಸಮಯಾನುಸಾರ ತಮ್ಮ ಪ್ರವೃತ್ತಿಯ ಬಂಧನಗಳನ್ನು ಸಡಲಿಸಿಕೊಂಡು ಸೇವೆಯಲ್ಲಿ ಎಷ್ಟು

ಸಹಯೋಗಿಗಳು ಆಗುವಿರೋ ಅಷ್ಟು ಲೆಕ್ಕಾಚಾರ ಬೇಗನೇ ಚುಕ್ತಾ ಆಗುವುದು. ಮಾತೆಯರು ಈ ರೀತಿ ಸಹಯೋಗಿ ಆಗುವುದರಲ್ಲಿಯೇ ತಮ್ಮ ಉನ್ನತಿಯ ಸಾಧನವೆಂದು ತಿಳಿಯಬೇಕು. ಕೇಳು ಮತ್ತು ಹೇಳುವುದು – ಎರಡೂ ಅನುಭವ ಮಾಡಬೇಕು. ಹೇಗೆ ತಂದೆ ಸಹಯೋಗಿ ಆಗುತ್ತಾರೋ ಹಾಗೆ ಮಕ್ಕಳು ಸಹಯೋಗಿಯಾಗಬೇಕು. ಇದೇ ಸಹಯೋಗ ಪಡೆಯುವುದಾಗಿದೆ. ಹಾಗಾದರೆ ತಮ್ಮ ಬಂಧನಗಳನ್ನು ಸಡಿಲಗೊಳಿಸಿಕೊಂಡು ಸೇವೆಯಲ್ಲಿ ಸಹಯೋಗಿಯಾಗುವಂತೆ ಈ ಗುಂಪು ಶಕ್ತಿ ತುಂಬಿಕೊಂಡು ಹೋಗಬೇಕು. ಈ ವಿಷಯದಲ್ಲಿ ಕೊರತೆಯಿದ್ದರೆ ಪೂರ್ಣ ಅಂಕಗಳನ್ನು ಹೇಗೆ ಪಡೆಯುವಿರಿ. ಗುರಿ ಪೂರ್ಣವಾಗಬೇಕಲ್ಲವೇ? ಆದ್ದರಿಂದ ಈ ಗುಂಪು ವಿಶೇಷ ಇಂತಹ ಯುಕ್ತಿಗಳನ್ನು ರಚಿಸುವ ತರಬೇತಿಯನ್ನು ಪಡೆದು ಹೋಗಬೇಕು. ಭಟ್ಟಿಯಲ್ಲಿ ಹೇಗೆ ತಯಾರಾಗಿ ಹೋಗಬೇಕು ಎಂದು ತಿಳಿಯಿತೇ? ಸೇವಾಧಾರಿ ಮತ್ತು ಸಹಯೋಗಿ ಮನೆಯಲ್ಲಿರುತ್ತಾ ಶಕ್ತಿ-ಸ್ವರೂಪದ ಸ್ಮೃತಿ ಸದಾ ಇರುವುದರಿಂದ ಕರ್ಮ-ಬಂಧನ ವಿಘ್ನ ಹಾಕುವುದಿಲ್ಲ. ಮನೆಯಲ್ಲಿರುತ್ತೀರಿ ಆದರೆ ಶಕ್ತಿ ರೂಪದ ಬದಲು ಪವಿತ್ರ ಪ್ರವೃತ್ತಿಯ ಭಾವನೆ ಹೆಚ್ಚು ಇರುತ್ತದೆ. ಪ್ರವೃತ್ತಿಯಲ್ಲಿರುತ್ತಾ ಶಕ್ತಿಯ ವೃತ್ತಿ ಕಡಿಮೆಯಿರುತ್ತದೆ. ಶಕ್ತಿಯ ಅಲಂಕಾರಗಳು ಸದಾಕಾಲಕ್ಕೆ ಇರುವುದಿಲ್ಲ. ಆದ್ದರಿಂದ ಇನ್ನೂವರೆಗೂ ಕರ್ಮ-ಬಂಧನವಿದೆ. ಏನು ಮಾಡುವುದು, ಹೇಗೆ ಮಾಡುವುದು, ಹೇಗೆ ಕರ್ಮ-ಬಂಧನವನ್ನು ಕತ್ತರಿಸುವುದು ಎಂಬ ಧ್ವನಿ ಕೇಳಿಸುತ್ತದೆ. ಈಗ ಭಟ್ಟಿಯಲ್ಲಿ ತಮ್ಮ ಸ್ಮೃತಿ ಮತ್ತು ಸ್ವರೂಪ ವನ್ನು ಬದಲಿಸಿಕೊಂಡು ಹೋಗಿ ಆದ್ದರಿಂದ ಎರಡು ಮಾತುಗಳನ್ನು ನೆನಪಿಡಿ. ಒಂದು ಪರಿವರ್ತನೆಯಾಗುವುದು ಇನ್ನೊಂದು ಸವಾಲು ಹಾಕುವುದು. ಶಕ್ತಿರೂಪದಲ್ಲಿ ತಮ್ಮ ವೃತ್ತಿ ಮತ್ತು ಸ್ವರೂಪವನ್ನು ಬದಲಾಯಿಸಿಕೊಳ್ಳಿ ಮತ್ತು ಎಷ್ಟೆಷ್ಟು ತಮ್ಮನ್ನು ಬದಲಾಯಿಸಿಕೊಳ್ಳುವಿರೋ ಅಷ್ಟು ಬೇರೆಯವರಿಗೆ ಸವಾಲು ಹಾಕುವಿರಿ. ಆದ್ದರಿಂದ ಈ ಎರಡು ಮಾತುಗಳನ್ನು ನೆನಪಿಡಿ. ಸುಕರ್ಮ ಮಾಡಿದಾಗ ತಂದೆಯ ಸ್ನೇಹ ಸ್ವರೂಪ (ಸುಕರ್ಮ- ಸ್ನೇಹ ಸ್ವರೂಪ) ಸಮ್ಮುಖದಲ್ಲಿ ಬರುತ್ತದೆ ಮತ್ತು ವಿಕರ್ಮ ಮಾಡಿದರೆ ವಿಕರಾಳ ರೂಪವನ್ನು (ವಿಕರ್ಮ- ವಿಕರಾಳ ರೂಪ) ಎದುರಿಗೆ ತಂದುಕೊಳ್ಳಬೇಕು. ತಾವು ಸ್ನೇಹಿಯಾಗಿರುವಿರಲ್ಲವೇ? ಸ್ನೇಹಿ ಯಾವಾಗಲೂ ಸುಕರ್ಮಿಯಾಗಿರುತ್ತಾರೆ. ಯಾವುದೇ ವಿಕರ್ಮವಾಗಬಾರದು. ಎಂಬುದು ಸದಾ ಸ್ಮೃತಿಯಲ್ಲಿ ಇಡಬೇಕು. ಏಕೆಂದರೆ ತಾವೆಲ್ಲರೂ ಸೃಷ್ಟಿಯ ಸ್ಟೇಜ್ ಮೇಲೆ ಹೀರೋ ಪಾತ್ರಧಾರಿಗಳು, ಹೀರೋ ಪಾತ್ರಧಾರಿಗಳ ಮೇಲೆ ಎಲ್ಲರ ದೃಷ್ಟಿಯಿರುತ್ತದೆ. ಆದ್ದರಿಂದ ತಮ್ಮನ್ನು ಪ್ರವೃತ್ತಿಯಲ್ಲಿರುವವರು ಎಂದು ತಿಳಿಯದೇ, ಸ್ಟೇಜ್ ಮೇಲೆ ನಾಯಕ ಪಾತ್ರಧಾರಿ ಎಂದು ತಿಳಿದು ಪ್ರತಿ ಕರ್ಮವನ್ನು ಮಾಡಿದರೆ ಯಾವ ವಿಕರ್ಮವೂ ಆಗುವುದಿಲ್ಲ.

ವಿಜ್ಞಾನದ ಪರಮಾಣು ಶಕ್ತಿ ಈಗ ಏನೆಲ್ಲವನ್ನು ತೋರಿಸುತ್ತಿದೆ. ಅದೇ ರೀತಿ ಶಾಂತಿಯ ಶಕ್ತಿದಳದಲ್ಲಿ ಪ್ರವೃತ್ತಿಯಲ್ಲಿರುವ ತಾವು ಉದಾಹರಣೆಯಾಗುವವರು ಆಗಿದ್ದೀರಿ. ಅದು ಪರಮಾಣು ಶಕ್ತಿಯಾಗಿದೆ ಮತ್ತು ತಾವು ಸೃಷ್ಟಿಯ ಮುಂದೆ ಒಂದು ಉದಾಹರಣೆಯಾಗಿದ್ದೀರಿ. ಆದ್ದರಿಂದ ತಾವು ಉದಾಹರಣೆ ಅಥವಾ ಸತ್ಯ ಪ್ರಮಾಣವಾಗಿ ಬಹಳ ಸೇವೆಯನ್ನು ಮಾಡಬಹುದು. ಮಾತೆಯರ ಬೇಡಿಕೆ ಬಹಳ ಇದೆ. ಮಾತೆಯರ ಕಾರಣ ಮೂಲೆಮೂಲೆಗೂ ಸಂದೇಶ ಕೊಡುವುದು ಇನ್ನೂ ಉಳಿದಿದೆ. ಅನೇಕ ಆತ್ಮರಿಗೆ ಸಂದೇಶ ಸಿಗದಿರುವ ಜವಾಬ್ದಾರಿ ತಮ್ಮ ಮೇಲಿದೆ. ಆದ್ದರಿಂದ ಈ ಗುಂಪಿಗೆ ಇದೇ ರೀತಿ ತಯಾರಾಗಬೇಕು. ಈ ಗುಂಪು ಸಮಯಾನುಸಾರ ಸೇವೆಯಲ್ಲಿ ಸಹಯೋಗಿಯಾಗುವರು. ಭರವಸೆಯವರಿದ್ದಾರೆ. ಅಧರಕುಮಾರರ ಗುಂಪು ಸಹ ಭರವಸೆಯ ಗುಂಪು ಆಗಿತ್ತು. ಅದೇ ರೀತಿ ಈ ಗುಂಪು ಸಹ ಭವಿಷ್ಯದ ಸಹಯೋಗಿಯಾಗಿದೆ. ಆದರೆ ಹೇಗೆ ಸಹಯೋಗಿಯಾಗಬೇಕು, ಅದರ ಯುಕ್ತಿಯೂ ಇದೆ, ಆದರೆ ಶಕ್ತಿಯಿಲ್ಲ. ಆದ್ದರಿಂದ ತಮ್ಮ ಸ್ವರೂಪ ಪರಿವರ್ತನೆಯ ಪ್ರಮಾಣ ಪತ್ರವನ್ನು ತಮ್ಮ ಶಿಕ್ಷಕಿಯಿಂದ ತೆಗೆದುಕೊಂಡು ಹೋಗಿ. ಒಬ್ಬೊಬ್ಬ ಕುಮಾರಿ 100 ಬ್ರಾಹ್ಮಣರಿಗಿಂತ ಉತ್ತಮವೆಂದು ಗಾಯನ ಮಾಡಲ್ಪಟ್ಟಿರುವಂತೆ ಒಬ್ಬೊಬ್ಬ ಮಾತೆ ಜಗನ್ಮಾತೆಯಾಗಿದ್ದಾಳೆ. ಎಲ್ಲಿ 100 ಬ್ರಾಹ್ಮಣರು, ಎಲ್ಲಿ ಇಡೀ ಜಗತ್ತು. ಹಾಗಾದರೆ ಯಾರ ಮಹಿಮೆ ಶ್ರೇಷ್ಠವಾಯಿತು? ಒಬ್ಬೊಬ್ಬ ಮಾತೆ ಜಗತ್ಮಾತೆಯಾಗಿ ಜಗತ್ತಿನ ಆತ್ಮರ ಮೇಲೆ ದಯೆ, ಸ್ನೇಹ ಮತ್ತು ಕಲ್ಯಾಣದ ಭಾವನೆಯನ್ನು ಇಟ್ಟುಕೊಳ್ಳಿ. ಅದಕ್ಕಾಗಿ ಈ ಗುಂಪು ಒಂದು ಪ್ರತಿಜ್ಞೆಯನ್ನು ಮಾಡಬೇಕು. ಪ್ರತಿಜ್ಞೆ ಮಾಡುವ ಸಾಹಸವಿದೆಯಾ? ಯಾವುದೇ ಪ್ರತಿಜ್ಞೆ ಇರಲಿ ಕೇಳಿದ ಮೇಲೆ ಸಾಹಸವಿಟ್ಟುಕೊಳ್ಳುವಿರಾ? ಕೇಳುವ ಮೊದಲು ಸಾಹಸವಿದೆಯೋ ಅಥವಾ ಕೇಳಿದ ನಂತರ ಸಾಹಸವಿಟ್ಟುಕೊಳ್ಳುವಿರೋ? ಏನೆಂದು

ತಿಳಿಯುತ್ತೀರಿ? ಯಾವುದೇ ಪ್ರತಿಜ್ಞೆಯಿರಲಿ ಸಾಹಸವಿದೆಯೇ? ಕಠಿಣವಾದ ಪ್ರತಿಜ್ಞೆಯಿದ್ದರೆ ಎಂದು ಯೋಚಿಸುವಿರಾ? ಪ್ರತಿಯೊಬ್ಬರೂ ಈ ಪ್ರತಿಜ್ಞೆಯನ್ನು ಮಾಡಬೇಕು ಸಮಯಾನುಸಾರ ಸೇವೆಯಲ್ಲಿ ಸಹಯೋಗಿ ಮತ್ತು ಜೊತೆಗೆ ಶಕ್ತಿ- ಸ್ವರೂಪರಾಗಿ ವಿಘ್ನ ವಿನಾಶಕರಾಗಿಯೇ ಪ್ರವೃತ್ತಿಯಲ್ಲಿ ಇರುವೆವು. ಸಹಜ ಪ್ರತಿಜ್ಞೆಯಾಗಿದೆಯಲ್ಲವೇ? ವಿಘ್ನಗಳು ಬಂದಾಗ ಚೀರಾಡದೇ, ಭಯಪಡದೇ ಶಕ್ತಿಯಾಗಿ ಎದುರಿಸುತ್ತೇವೆ. ಈ ಪ್ರತೀಜ್ಞೆಯನ್ನು ತಮ್ಮೊಂದಿಗೆ ತಾವು ಸದಾಕಾಲಕ್ಕಾಗಿ ಮಾಡಿಕೊಂಡು ಹೋಗಿ.

ಯಾವುದೇ ಪ್ರಕಾರದ ಆಸಕ್ತಿ ಉಳಿದಿದ್ದರೆ ಅಲ್ಲಿಗೂ ಮಾಯೆ ಬರಬಹುದು. ಆಸಕ್ತಿಯಿರುವುದರಿಂದ ಮಾಯೆ ಬರುತ್ತದೆ. ಅನಸಕ್ತರಾದರೆ ಮಾಯೆ ಬರುವುದಿಲ್ಲ. ಆಸಕ್ತಿ ನಾಶವಾದಾಗ ಶಕ್ತಿಸ್ವರೂಪರಾಗುತ್ತೀರಿ. ತಮ್ಮ ದೇಹದಲ್ಲಿ ಅಥವಾ ಸಂಬಂಧದಲ್ಲಿ, ಯಾವುದೇ ಪದಾರ್ಥದಲ್ಲಿ, ಎಲ್ಲಿಯಾದರೂ ಆಸಕ್ತಿಯಿದ್ದರೆ ಮಾಯೆ ಬರುವುದು ಮತ್ತು ಶಕ್ತಿಯರಾಗುವುದಿಲ್ಲ. ಆದ್ದರಿಂದ ಶಕ್ತಿರೂಪರಾಗಲು ಆಸಕ್ತಿಯನ್ನು ಅನಾಸಕ್ತಿಯಲ್ಲಿ ಬದಲಾಯಿಸಿ. ಒಂದು ಬೆಳಗುತ್ತಿರುವಂತಹ ಜ್ಯೋತಿ ಅನೇಕ ಜ್ಯೋತಿಗಳನ್ನು ಬೆಳಗಿಸಬಲ್ಲದು ಎಂದು ಎಲ್ಲರಿಗೂ ಹೇಳುತ್ತೀರಿ ಅದೇ ತರಹ ಒಬ್ಬೊಬ್ಬರು ಇಡೀ ವಿಶ್ವದ ಕಲ್ಯಾಣದ ನಿಮಿತ್ತರಾಗಬಲ್ಲಿರಿ. ಆದ್ದರಿಂದ ತಮ್ಮ ಕರ್ತವ್ಯವನ್ನು ಮತ್ತು ತಮ್ಮ ಸ್ವರೂಪವನ್ನು ನೆನಪಿಟ್ಟುಕೊಂಡು ನಡೆಯಿರಿ. ಬ್ರಹ್ಮನ ಭುಜಗಳಾಗಿರುವಿರಲ್ಲವೇ? ತಮ್ಮನ್ನು ಬ್ರಹ್ಮನ ಭುಜಗಳು ಎಂದು ತಿಳಿದುಕೊಳ್ಳುತ್ತೀರಾ? ಅವರ ಕರ್ತವ್ಯವೇನು? ಸ್ಥಾಪನೆ ಬ್ರಹ್ಮನ ಕರ್ತವ್ಯವಾಗಿದೆ. ಹಾಗಾದರೆ ಬ್ರಹ್ಮನ ಭುಜಗಳ ಕರ್ತವ್ಯವೂ ಸ್ಥಾಪನೆಯ ಕಾರ್ಯದಲ್ಲಿ ಸದಾ ತತ್ಪರರಾಗಿರುವುದು. ಹದ್ದಿನ ಸಂಬಂಧಗಳಲ್ಲಿ ಬರುವ ವಿಧಿಯನ್ನು ಇವರಿಗೆ ಕಲಿಸಿ. ತಮ್ಮನ್ನು ನಿರ್ಬಂಧನ ಮಾಡಿಕೊಳ್ಳಬಲ್ಲಿರಿ ಆದರೆ ವಿಧಿ ಗೊತ್ತಿಲ್ಲ. ಒಂದು ವಿಧಿ ಗೊತ್ತಿಲ್ಲ, ಇನ್ನೊಂದು ಶಕ್ತಿ ಇಲ್ಲ. ಶಕ್ತಿಯನ್ನೂ ತುಂಬಿಕೊಳ್ಳಬೇಕು ಮತ್ತು ವಿಧಿಯನ್ನೂ ಕಲಿತುಕೊಳ್ಳಬೇಕು. ಆದರೂ ಬಾಪ್ ದಾದಾ ಭರವಸೆಯ ಗುಂಪು ಎಂದು ತಿಳಿಯುತ್ತಾರೆ. ಪ್ರತಿಯೊಬ್ಬರೂ ಈಗ ಎಷ್ಟು ತಮ್ಮನ್ನು ಸೇವೆಗೆ ಒಪ್ಪಿಸಿಕೊಳ್ಳುವಿರಿ ಎಂದು ನೋಡೋಣ. ತಮಗೆ ತಾವೇ ಸ್ವತಃ ಸೇವೆಯ ಅವಕಾಶವನ್ನು ತೆಗೆದುಕೊಳ್ಳಬೇಕು. ಅವರಿಗೆ ಪ್ರಶಂಸೆ  ಸಿಗುತ್ತದೆ, ಹೇಳಿದ ಮೇಲೆ ಮಾಡಿದರೆ ಸಿಗುವುದಿಲ್ಲ. ಈಗ ನೋಡೋಣ ಯಾರು ಯಾರು ತಮ್ಮನ್ನು ಸೇವೆಗೆ ಒಪ್ಪಿಸಿಕೊಳ್ಳುವಿರಿ ಎಂದು. ಸ್ನೇಹಿಯಾಗಿದ್ದೀರಿ ಆದರೆ ಸ್ನೇಹಿಯ ಜೊತೆಗೆ ಸಹಯೋಗಿಯಾಗಿ. ಈ ಗುಂಪಿಗೆ ಯಾವ ಹೆಸರಿಡೋಣ? ನಾಮಕರಣ ಮಾಡುತ್ತಾರಲ್ಲವೇ? ಏಕೆಂದರೆ ಪರಿವರ್ತನೆಯ ಭಟ್ಟಿಯಲ್ಲಿ ಬಂದಿರುವಿರಿ, ತಾವು ಸಹ ನಾಮಕರಣದ ಉತ್ಸವ ಆಚರಿಸುತ್ತೀರಲ್ಲವೇ? ಈ ಗುಂಪಿನ ಹೆಸರೇನು? ಇದಾಗಿದೆ ಸದಾ ಸಹಯೋಗಿ ಮತ್ತು ಶಕ್ತಿಸ್ವರೂಪ ಗುಂಪು. ಈಗ ತಮ್ಮ ಶಕ್ತಿಯನ್ನು ಎಂದೂ ಕಡಿಮೆ ಮಾಡಿಕೊಳ್ಳಬೇಡಿ. ತಮ್ಮ ಶಕ್ತಿಯನ್ನು ಯಾವಾಗ ಕಳೆದುಕೊಳ್ಳುವಿರೋ ಆಗ ರಾವಣನೂ ನೋಡುತ್ತಾನೆ. ಇವರು ಶಕ್ತಿಯನ್ನು ಕಳೆದುಕೊಂಡಿದ್ದಾರೆ ಎಂದು ಬಹಳ ಖುಷಿಸುತ್ತಾನೆ. ಶಕ್ತಿ ಕಳೆದುಕೊಳ್ಳುವುದು ಎಂದರೆ ರಾವಣನನ್ನು ಕರೆಯುವುದು. ಆದ್ದರಿಂದ ಎಂದಿಗೂ ತಮ್ಮ ಶಕ್ತಿಯನ್ನು ಕಡಿಮೆ ಮಾಡಿಕೊಳ್ಳಬೇಡಿ. ಜಮಾ ಮಾಡಿಕೊಳ್ಳುವುದನ್ನು ಕಲಿತುಕೊಳ್ಳಿ. ಭವಿಷ್ಯ 21 ಜನ್ಮಗಳಿಗೆ ಶಕ್ತಿಯನ್ನು ಜಮಾ ಮಾಡಿಕೊಳ್ಳಿ. ಈಗಿನಿಂದಲೇ ಜಮಾ ಮಾಡಿಕೊಂಡರೆ ಜಮಾ ಆಗುವುದು. ಆದ್ದರಿಂದ ಜಮಾ ಎಷ್ಟು ಮಾಡಿಕೊಂಡೆ ಎಂದು ಸದಾ ಯೋಚಿಸಿ. ಒಳ್ಳೆಯದು.

ಅವ್ಯಕ್ತ ಮುರಳಿ 01-03-1971

***ಸಿದ್ಧಿ ಸ್ವರೂಪರಾಗಲು ಸಹಜ ವಿಧಿ***

ಆತ್ಮಿಕ ಸ್ಥಿತಿಯಲ್ಲಿ ಮನನ ಚಿಂತನೆ ಮಾಡಿ ಧಾರಣೆಯಲ್ಲಿ ತರಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಪ್ರತಿಯೊಂದು ಕರ್ಮದ ಆದಿ, ಮಧ್ಯ, ಅಂತ್ಯವನ್ನು ತಿಳಿದು ಕರ್ಮವನ್ನು ಆಚರಿಸುವ ತ್ರಿಕಾಲ ದರ್ಶಿ ಸ್ವರೂಪ.

2. ನಾನು ತ್ರಿಕಾಲ ದರ್ಶಿ ಸ್ಥಿತಿಯಲ್ಲಿದ್ದು ಕಾರ್ಯವನ್ನು ಮಾಡಿ ಸಫಲತಾ ಮೂರ್ತಿ ಮತ್ತು ಸಂಪೂರ್ಣ ಮೂರ್ತಿಯಾಗಿ ತಯಾರಾಗಿದ್ದೇನೆ.

3. ನಾನು ವ್ಯರ್ಥ ಸಂಕಲ್ಪಗಳನ್ನು ಸಮಾಪ್ತಗೊಳಿಸಲ್ಲಿದ್ದೇವೆ ಮಾಡಿರುವ ಸಿದ್ಧಿ ಸ್ವರೂಪ.

4. ನಾನು ನನ್ನ ಶ್ರೇಷ್ಠ ಕರ್ಮಗಳ ಮುಖಾಂತರ ಸೇವೆಯನ್ನು ಮಾಡುವ ಈಶ್ವರೀಯ ಸೇವಾದಾರಿ.

5. ನನ್ನ ಪ್ರತಿಯೊಂದು ಕರ್ತವ್ಯದ ಆಧಾರದಿಂದ ಪ್ರತಿಯೊಬ್ಬರು ತಂದೆಯ ಕಡೆ ಆಕರ್ಷಿತರಾಗುತ್ತಿದ್ದಾರೆ.

6. ನಾನು ಬಂಧನಗಳೆಲ್ಲವನ್ನು ಹಗುರ ಮಾಡಿಕೊಂಡು ಸೇವೆಯಲ್ಲಿ ಸಹಯೋಗಿಯಾಗಿ, ಕರ್ಮ ಬಂಧನಗಳನ್ನು ಕರ್ಮ ಸಂಬಂಧಗಳಲ್ಲಿ ಪರಿವರ್ತಿಸಿ, ಕರ್ಮ ಖಾತೆಯನ್ನು ಸಮಾಪ್ತಿ ಮಾಡಿಕೊಂಡಿದ್ದೇನೆ.

7. ನಾನು ಸದಾ ನನ್ನ ಶಕ್ತಿ ಸ್ವರೂಪದ ಸ್ಮೃತಿಯಿಂದ ನನ್ನ ಕರ್ಮ ಬಂಧನದ ವಿಘ್ನಗಳನ್ನು ಸಮಾಪ್ತಿ ಮಾಡಿಕೊಂಡಿದ್ದೇನೆ.

8.ಸದಾ ನಾನು ಎರಡು ವಿಷಯಗಳನ್ನು ನೆನಪಿಟ್ಟಿದ್ದೇನೆ

- ನಾನು ನನ್ನ ವೃತ್ತಿ ಮತ್ತು ಸ್ವರೂಪವನ್ನು ಪರಿವರ್ತನೆ ಮಾಡಿಕೊಳ್ಳುತ್ತೇನೆ ಮತ್ತು
- ನಾನು ಪರಿವರ್ತನೆಯಾಗುವ ಶಪಥವನ್ನು (ಚಾಲೆಂಜ್) ಮಾಡಿದ್ದೇನೆ.

9. ನಾನು ಸುಕರ್ಮಗಳನ್ನು ಮಾಡುವಾಗ ತಂದೆಯ ಸ್ನೇಹದ ಸ್ವರೂಪ ಮತ್ತು ವಿಕರ್ಮ ಮಾಡುವಾಗ ತಂದೆಯ ವಿರಾಟ ಸ್ವರೂಪ ಎದುರಿಗೆ ಇಟ್ಟುಕೊಂಡು ಸದಾ ಸ್ನೇಹದ ಸ್ವರೂಪವನ್ನು ಸ್ಮೃತಿ ಮಾಡುವ ಅರ್ಥಾತ್ ಸುಕರ್ಮ ಮಾಡುವ ಸುಕರ್ಮಿಯಾಗಿದ್ದೇನೆ.

10. ನಾನು ಶಿವಪರಮಾತ್ಮನಿಂದ **ಬೇಹದ್ ಪುತ್ರವಾನ್ ಭವ** ಎಂಬ ವರದಾನವನ್ನು ಸ್ವೀಕರಿಸಿ **ಜಗನ್ಮಾತೆಯಾಗಿ** ವಿಶ್ವದಲ್ಲಿರುವ ಆತ್ಮರೆಲ್ಲರ ಮೇಲೆ ದಯೆ, ಸ್ನೇಹ, ಕಲ್ಯಾಣ ಭಾವದಿಂದ ಇದ್ದೇನೆ.

11. ನಾನು ವಿಘ್ನಗಳು ಬಂದಾಗ ಹೆದರುವುದಿಲ್ಲ, ಗಾಬರಿಯಾಗುವುದಿಲ್ಲ ಆದರೆ ಶಕ್ತಿ ಸ್ವರೂಪವಾಗಿ ಎದುರಿಸುತ್ತೇನೆ ಎಂಬ ಪ್ರತಿಜ್ಞೆಯನ್ನು ಮಾಡುತ್ತಿದ್ದೇನೆ.

12. ನಾನು ಎಲ್ಲಾ ರೀತಿಯ ದೇಹ ಅಥವಾ ದೇಹ ಸಂಬಂಧದ ಮತ್ತು ಪದಾರ್ಥಗಳ ಮೇಲೆ ಅನಾಸಕ್ತವಾಗಿರುವ (ಆಸಕ್ತಿಯನ್ನು ಸಮಾಪ್ತಿ ಮಾಡಿರುವ) ಶಕ್ತಿ ಸ್ವರೂಪ.